

ಅಮೃತಾ ಅಯ್ಯಂಗಾರ್



ಸದ್ಯಕ್ಕೆ ಅವರು ಮೈಸೂರಿನಲ್ಲಿ ಬುಟಿಕ್ ನಡೆಸುತ್ತಿದ್ದಾರೆ. ಭಿನ್ನವಾದದ್ದೇನಾದರೂ ಮಾಡಬೇಕು ಎಂಬ ಆಲೋಚನೆಯಲ್ಲಿದ್ದಾಗಲೇ ತೆಲುಗಿನಲ್ಲಿ ನಡೆದ ಪ್ರಯತ್ನ ಅವರ ಗಮನಸೆಳೆಯಿತು. ಕನ್ನಡದಲ್ಲಿಯೂ ಅಂಥ ಒಂದು ಮರುಸೃಷ್ಟಿಯ ಪ್ರಯತ್ನವನ್ನು ಯಾಕೆ ಮಾಡಬಾರದು ಎಂಬ ಉಮೇದು ಮೂಡಿತು. ಅವರ ಉತ್ಸಾಹಕ್ಕೆ ಮೈಸೂರಿನವರೇ ಆದ ಛಾಯಾಗ್ರಾಹಕ ಗಣೇಶ್ ಮತ್ತು ಮೇಕಪ್ ಕಲಾವಿದೆ ಪ್ರಿಯಾಂಕಾ ಹೆಗಲು ಕೊಟ್ಟರು. ಪರಿಣಾಮವಾಗಿ ರವಿವರ್ಮನ ಆರು ತೈಲವರ್ಣದ ಚಿತ್ರಗಳು ಮರುಸೃಷ್ಟಿಯಾಗಿವೆ.

‘ತೆಲುಗಿನ ಪ್ರಯತ್ನ ನೋಡಿದಾಗ ಕನ್ನಡದಲ್ಲಿಯೂ ಯಾಕೆ ಇಂಥದ್ದೊಂದು ಪ್ರಯತ್ನ ಮಾಡಬಾರದು ಎಂದು ನಮಗೆ ಬಲವಾಗಿ ಅನಿಸಿತು. ಆದರೆ ನಮಗೆ ಚಿತ್ರರಂಗದಲ್ಲಿ ಯಾರೂ ಅಷ್ಟಾಗಿ ಪರಿಚಯ ಇರಲಿಲ್ಲ. ಹಾಗಾಗಿ ಹಲವು ಕಲಾವಿದರು ನಮ್ಮ ಪ್ರಸ್ತಾಪಕ್ಕೆ ಒಪ್ಪಿಕೊಳ್ಳಲಿಲ್ಲ. ಆದರೆ ನಾವು ನಮ್ಮ ಪ್ರಯತ್ನ ಬಿಡಲಿಲ್ಲ. ಕಾವ್ಯಾ ಶಾಸ್ತ್ರಿ, ಐಶಾನಿ ಶೆಟ್ಟಿ, ಅಮೃತಾ ಅಯ್ಯಂಗಾರ್ ನಮ್ಮ ಪ್ರಯತ್ನಕ್ಕೆ ಒತ್ತಾಸೆ ನೀಡಿದರು. ನಾನೂ ಎರಡು ಚಿತ್ರಗಳಿಗೆ ಮಾಡೆಲ್ ಆಗಿದ್ದೇನೆ’ ಎಂದು ವಿವರಿಸುತ್ತಾರೆ ಶಹನ್.

ಕಲಾವಿದರ ಒಪ್ಪಿಗೆಯಷ್ಟೇ ಇಲ್ಲಿ ಮುಖ್ಯವಾಗಿರಲಿಲ್ಲ. ಬದಲಿಗೆ ಮೂಲ ಕಲಾಕೃತಿಗೆ ಅವರ ಮುಖ ಹೊಂದುವಂತೆ ಇರುವುದೂ ಅಷ್ಟೇ ಮಹತ್ವದ್ದಾಗಿತ್ತು. ಅಂಥ ಆಯ್ಕೆ ಮಾಡುವುದು ಅವರಿಗೆ ಒಂದು ದೊಡ್ಡ ಸವಾಲೂ ಆಗಿತ್ತು. ಅದರಲ್ಲಿ ಯಶಸ್ವಿಯಾಗಿದ್ದೇವೆ ಎಂಬ ಖುಷಿಯಲ್ಲಿ ತಂಡವಿದೆ. ಎಲ್ಲ ಪೇಂಟಿಂಗ್‌ಗಳನ್ನು ಮೈಸೂರಿನಲ್ಲಿಯೇ ಶೂಟ್ ಮಾಡಲಾಗಿದೆ. ಐಶಾನಿ ಶೆಟ್ಟಿ ಅವರು ಮಾಡೆಲ್ ಆಗಿರುವ ಚಿತ್ರವನ್ನು ಮಾತ್ರ ಬೆಂಗಳೂರಿನಲ್ಲಿ ಶೂಟ್ ಮಾಡಿದ್ದಾರೆ.

‘ನೂರಾರು ವರ್ಷಗಳಷ್ಟು ಹಿಂದಿನ ಪೇಂಟಿಂಗ್ ಅನ್ನು ಫೋಟೊಶೂಟ್‌ನಲ್ಲಿ ಮಾಡೆಲ್‌ಗಳನ್ನಿಟ್ಟುಕೊಂಡು ಮರುಸೃಷ್ಟಿಸುವುದು ಖಂಡಿತ ಸುಲಭವಲ್ಲ. ಮೊದಲು ಮಾಡೆಲ್‌ಗಳು ಹೊಂದಬೇಕು. ನಂತರ ಅವರ ಮುಖಭಾವ, ಮೇಕಪ್, ಆಭರಣಗಳು, ಕಾಸ್ಟ್ಯೂಮ್ ಎಲ್ಲವೂ ಹೊಂದಿಕೆಯಾಗಬೇಕು. ಅಷ್ಟೆಲ್ಲ ಆಗಿ ಫೋಟೊ ಚೆನ್ನಾಗಿ ಬರಬೇಕು. ಈ ಎಲ್ಲ ಒತ್ತಡಗಳನ್ನೂ ನಿಭಾಯಿಸಿಯೇ ಈ ಪ್ರಯತ್ನದಲ್ಲಿ ಗೆದ್ದಿದ್ದೇವೆ. ನಮಗೆ ಇನ್ನಷ್ಟು ಪೇಂಟಿಂಗ್‌ಗಳ ಮರುಸೃಷ್ಟಿ ಮಾಡುವ ಆಸೆ ಇತ್ತು. ಕೆಲವು ಕಾರಣಗಳಿಂದ ಅದು ಸಾಧ್ಯವಾಗಿಲ್ಲ’ ಎನ್ನುವ ಶಹನ್‌ಗೆ ತಮ್ಮ ಪ್ರಯತ್ನದ ಬಗ್ಗೆ ತೃಪ್ತಿ ಇದೆ.

ಈ ಚಿತ್ರಗಳನ್ನು ಈಗಾಗಲೇ ಸೋಷಿಯಲ್ ಮೀಡಿಯಾದಲ್ಲಿ ಹರಿಬಿಟ್ಟಿದ್ದಾರೆ. ಆ ಚಿತ್ರಗಳು ಸಾಕಷ್ಟು ಮೆಚ್ಚುಗೆಯನ್ನೂ ಪಡೆಯುತ್ತಿವೆ. ಚಿತ್ರರಂಗದ ಹಲವರು ಈಗಾಗಲೇ ಕರೆಮಾಡಿ ಮೆಚ್ಚುಗೆ ಸೂಚಿಸಿದ್ದಾರಂತೆ. ಹಾಗೆಯೇ ಮುಂದಿನ ವರ್ಷ ಕ್ಯಾಲೆಂಡರ್ ಅನ್ನು ರೂಪಿಸಿ ಎಂಬ ಸಲಹೆಯನ್ನೂ ನೀಡಿದ್ದಾರೆ.

ಈಗ ಮೈಸೂರಿನ ವೈಶಿಷ್ಟ್ಯದ ಕುರಿತು ತಿಳಿಸುವ ವಿಶಿಷ್ಟ ವಿಡಿಯೊ ಒಂದನ್ನು ರೂಪಿಸುವ ಪ್ರಯತ್ನದಲ್ಲಿ ಇದೇ ತಂಡವಿದೆ. ಅದನ್ನೂ ಚಿತ್ರರಂಗದ ಯಾವುದಾದರೂ ಕಲಾವಿದರನ್ನು ಇಟ್ಟುಕೊಂಡೇ ಮಾಡುವ ಆಲೋಚನೆ ಅವರದ್ದು.

‘ಭಿನ್ನವಾಗಿರಬೇಕು ಮತ್ತು ಜನರಿಗೆ ಇಷ್ಟವಾಗಬೇಕು ಎಂಬ ಸೂತ್ರವಿಟ್ಟುಕೊಂಡು ಈ ಪ್ರಯತ್ನ ಮಾಡಿದ್ದೇವೆ. ಇದೇ ರೀತಿಯ ಇನ್ನಷ್ಟು ಪ್ರಯತ್ನಗಳನ್ನು ನಮ್ಮ ತಂಡದಿಂದ ಮಾಡುತ್ತಲೇ ಇರುತ್ತೇವೆ’ ಎನ್ನುವ ಶಹನ್, ಮಾತಿನಲ್ಲಿ ಸದ್ಯದಲ್ಲಿಯೇ ಮತ್ತೊಂದು ಪ್ರಯೋಗದೊಂದಿಗೆ ಜನರ ಎದುರಿಗೆ ಬರುವ ಸೂಚನೆಯೂ ಇದೆ. ■